**ಶ್ರೀ ವೆಂಕಟರಾವ್ ನಾಡಗೌಡ** : ಸರ್ಕಾರ ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

**ಡಾ: ವಿ.ಎಸ್. ಆಚಾರ್ಯ** : ಈ ವರ್ಷದ ಪರಿಸ್ಥಿತಿ ಅಂದರೆ September October ನಲ್ಲಿ ಏನಾಯಿತೆಂದು ತಮಗೆಲ್ಲಾ ಗೊತ್ತಿದೆ. ಹಾಗಾಗಿ, ಹೊಸ ಪೊಲೀಸ್ ಸ್ಟೇಷನ್ ಪ್ರಾರಂಭಿಸಲಿಕ್ಕೆ ಈ ವರ್ಷ ಆರ್ಥಿಕ ಇಲಾಖೆಯಿಂದ ನಮಗೆ ಅನುಮತಿ ಸಿಗಲಿಲ್ಲ ಇದ್ದ ಸಂಗತಿ ಹೇಳಬೇಕಾಗಿದೆ, ಹೇಳಿದ್ದೇನೆ. ಆದರೂ ಸಹ A,B,C ಎಂದು ನಾವು categorize ಮಾಡಿಟ್ಟದ್ದರಲ್ಲಿ ಒಟ್ಟು 50 police Station ಗಳನ್ನು ತೆರೆಯಬೇಕೆಂದು ಇದ್ದುದರಲ್ಲಿ 25 police Stations ಅನ್ನು categorize ಮಾಡುವಾಗ ಅದರಲ್ಲಿ ಸಿಂಧನೂರು ಬರಲಿಲ್ಲ. ಆದರೆ, ನಾನು ಅದರ ಬಗ್ಗೆ ವಿಶೇಷ ಪ್ರಸ್ತಾವನೆಯನ್ನು ಈಗಾಗಲೇ D.G. ಯವರಿಂದ ಪಡೆದುಕೊಂಡಿದ್ದೇನೆ. 2010–11ರಲ್ಲಿ ಅಲ್ಲಿ ಒಂದು ಸಂಚಾರಿ ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡುತ್ತೇವೆ. ಬಜೆಟ್ ಇದೆ, ಅದಕ್ಕೆ ಅಲ್ಲಿ ಜಾಗವೂ ಇದೆ.

**ಶ್ರೀ ವೆಂಕಟರಾವ್ ನಾಡಗೌಡ** : ಧನ್ಯವಾದಗಳು.

**VI) ವಿಷಯ : ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ**

**ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)** : ಮಾನ್ಯ ಅಧ್ಯಕ್ಷರೆ, ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

**ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, ಹಿಂದಿನ ಉತ್ತರವೇ ಇದಕ್ಕೂ apply ಆಗುತ್ತದೆ.

ಕೊಪ್ಪಳ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪಡೆದು, ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನು ನುಸರಿಸಿ ಕೊಪ್ಪಳ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯಲು ಪರಿಶೀಲಿಸಲಾಗುವುದು.

ಪ್ರಸ್ತುತ ಹಾಲಿ ಕೊಪ್ಪಳ ನಗರ ಠಾಣೆಯ ಸಿಬ್ಬಂದಿಗಳ ಜೊತೆಗೆ ಬೇರೆ ಬೇರೆ ಪೊಲೀಸ್ ಠಾಣೆಗಳ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸರದಿ ಪ್ರಕಾರ ನಿಯೋಜಿಸಿಕೊಂಡು ಸಂಚಾರ ನಿಯಂತ್ರಣ ತೊಂದರೆಯನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಏಕೆಂದರೆ, ನಾವು 25 Police Stations ಬಗ್ಗೆ list ತಯಾರು ಮಾಡಿದ ಮರುದಿವಸವೇ ಗೊತ್ತಾಯಿತು ಹಳೆಯ ಹೊಸ ಜಿಲ್ಲೆಗಳಾದಂಥ ಭಟ್ಕಳ ಮತ್ತು ಹಾವೇರಿಯಲ್ಲಿ ಒಂದೊಂದು ಸಂಚಾರಿ Police Station ಹಾಗೂ traffic Police Station ಅನ್ನು ತೆರೆಯಬೇಕಾಗಿದ್ದು ಅದು ಎರಡೂ ಕಡೆ National Highway ಹಾದು ಹೋಗುವಂಥ ಸ್ಥಳವಾಗಿದ್ದು ಅದರ ಜೊತೆಯಲ್ಲಿ ಯಾದಗಿರಿ ಹೊಸ ಜಿಲ್ಲೆಯಾಗಿದೆ. ನಾನೇ ಇದನ್ನು ಗಮನಿಸಿ ದಿ: 2–02–2010ಕ್ಕೆ ಸಂಚಾರಿ police Station ತೆರೆಯುವುದಕ್ಕೆ ಬೇಕಾದಂಥ ಪ್ರಸ್ತಾವನೆ ಬಿಡುಗಡೆ ಮಾಡಿ ಮುಂದೆ ಹೋಗಬೇಕೆಂದಿದ್ದೇವೆ. 2010–11 ರಲ್ಲಿ ಅದು ಪ್ರಾರಂಭವಾಗುತ್ತದೆ. ಈ ವರ್ಷ ಏನೂ ಇಲ್ಲ, ಆದರೆ, ಮುಂದಿನ ವರ್ಷಕ್ಕೆ ನಮಗೆ ಬೇಕಾದ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಅದನ್ನು ನಾವು ಮಾಡುತ್ತೇವೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ :** ಜಿಲ್ಲಾ ಕೇಂದ್ರದಲ್ಲಿ Police Station ತೆರೆಯಬೇಕೆಂದು ಸುಮಾರು ವರ್ಷಗಳಿಂದ ನಾವು remind ಮಾಡುತ್ತಿದ್ದೇವೆ. 5000-6000 Mines Lorries ಓಡಾಡುತ್ತವೆ. ಎರಡು ಲಾರಿಗಳಲ್ಲಿ ಒಂದು ಲಾರಿ ಹೋಟೆಲ್ ಒಳಕ್ಕೆ ನುಗ್ಗಿದೆ, ಇನ್ನೊಂದು ಗುಡಿಸಲಿಗೆ ನುಗ್ಗಿದೆ ಎಂದು ಬೆಳಿಗ್ಗೆ ನನಗೆ ಪತ್ರಿಕೆಯವರು ಫೋನ್ ಮಾಡಿ ಹೇಳಿದ್ದರು. ಹಾಗಾಗಿ, accident ಗಳಿಂದ death rate ಅನ್ನು ತಮಗೆ ಹೇಳುತ್ತೇನೆ, ತಮಗೆ ಆಶ್ಚರ್ಯವಾಗಬಹುದು. 2009ರಲ್ಲಿ ಮುನಿರಾಬಾದ್ cross ನಿಂದ ಬನ್ನಿಕೊಪ್ಪ ರಾಷ್ಟ್ರೀಯ ಹೆದ್ದಾರಿ–63ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳ ಅಂಕಿಅಂಶಗಳ ವಿವರ. ಮೃತಪಟ್ಟವರು–705 ಜನರು, Case register ಆದದ್ದು–190 IPC 279, 304. ಗಾಯಗೊಂಡವರು 1706 ಜನರು. Case register 644 IPC 379, 337, 338. ತಿಂಗಳವಾರು ಮೃತಪಟ್ಟವರ ಮಾಹಿತಿ ಹೇಳುತ್ತೇನೆ. ಜನವರಿ ತಿಂಗಳಲ್ಲಿ 21 ಜನ ಮೃತಪಟ್ಟವರು, ಗಾಯ ಗೊಂಡವರು 95 ಜನರು. ಫೆಬ್ರವರಿಯಲ್ಲಿ 17 ಜನ ಮೃತಪಟ್ಟವರು, 153

ಜನರು ಗಾಯಾಳುಗಳು. ಮಾರ್ಚ್‌ನಲ್ಲಿ ಮೃತಪಟ್ಟವರು 16 ಜನ 89 ಗಾಯಾಳುಗಳು. ಹಾಗೆಯೇ ಏಪ್ರಿಲ್‌ನಲ್ಲಿ 29 ಜನ ಮೃತಪಟ್ಟವರು 115 ಗಾಯಾಳುಗಳು, ಮೇ ತಿಂಗಳಲ್ಲಿ 17 ಜನ ಮೃತಪಟ್ಟವರು, 105 ಗಾಯಾಳುಗಳು, ಜೂನ್‌ನಲ್ಲಿ ಮೃತಪಟ್ಟವರು 19 ಜನ, 329 ಗಾಯಾಳುಗಳು. ಜುಲೈನಲ್ಲಿ 12 ಜನ ಮೃತಪಟ್ಟವರು 375 ಗಾಯಾಳುಗಳು.

**ಅಧ್ಯಕ್ಷರು** : ತಾವು Police Station ಮಾಹಿತಿ ಕೇಳಿದ್ದೀರಿ, ಅದನ್ನಿಲ್ಲಿ ಹೇಳುತ್ತಿದ್ದೀರಿ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಇದು Police Station ಗಳಿಗನುಗುಣವಾಗಿ ಇರುವಂಥ ಮಾಹಿತಿಯನ್ನು ಹೇಳುತ್ತಿದ್ದೇನೆ. ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಏನರ್ಥ? ಇವರು ನಿರ್ಣಯ ಮಾಡಿದ್ದೇವೆಂದು ಹೇಳುತ್ತಾರೆ. ಮೊನ್ನೆ order ಮಾಡಿದ್ದಾರೆ. ಈ ತಾರತಮ್ಯವೇಕೆ? ದೇವದುರ್ಗಕ್ಕೆ ಸಂಚಾರಿ Police Station ಅನ್ನು ಮೊನ್ನೆ ಮಂಜೂರು ಮಾಡಿದ್ದಾರೆ. ನಮ್ಮ ಜಿಲ್ಲಾ ಕೇಂದ್ರದಲ್ಲಿ ಇಷ್ಟೊಂದು vehicles ಓಡಾಡುತ್ತಿವೆ. ನಮಗೆ Police Station ನ ಅವಶ್ಯಕತೆ ಇದೆ ಎಂದು ಕಳೆದ ಸಲ ಕೂಡ ಪ್ರಶ್ನೆ ಕೇಳಿದ್ದೆ. ಅವತ್ತೂ ಕೂಡ ಕೊಡುತ್ತೇವೆಂದು ವಾಗ್ದಾನ ಮಾಡಿದ್ದರು. ಇಲ್ಲಿಯವರೆಗೆ ಆಗಿಲ್ಲ. ಅಂದರೆ "ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ" ತರಹ ಮಾಡಿದರೆ ಹೇಗೆ?

**ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು)** : ಆಗಲೇ ಹೇಳಿದ ಹಾಗೆ, ಕೊಪ್ಪಳ, ಹಾವೇರಿ ಇವು 1997 ರಲ್ಲಿ ಆಗಿರತಕ್ಕಂಥ ಜಿಲ್ಲೆಗಳು. ನಾವು 2008ರಲ್ಲಿ ಅಧಿಕಾರಕ್ಕೆ ಬಂದೆವು. ಈ ವಿಷಯ ಗೊತ್ತಾದ ತಕ್ಷಣ ನಾನು 2ನೇ ತಾರೀಖು ಫೆಬ್ರವರಿಯಂದು ಹಾವೇರಿ ಮತ್ತು ಕೊಪ್ಪಳ ಬಗ್ಗೆ ಮತ್ತು ಹೊಸ ಜಿಲ್ಲೆಯಾದ ಯಾದಗೀರ್ ಬಗ್ಗೆ ಮುಂದಿನ ಈ 25 police Stations ಜೊತೆಗೆ ಅದೂ ಪ್ರಾರಂಭವಾಗುತ್ತದೆ.

**ಶ್ರೀ ವೆಂಕಟರಾವ್ ನಾಡಗೌಡ** : ಆ 25 police Stations ಜೊತೆಗೆ ಅದು ಮೂರು ಅಲ್ಲ ನಾನು ಹೇಳಿದ್ದನ್ನೂ ಸಹ ಸೇರಿಸಿ ಮಾಡಬೇಕು.